## ಪೂರ್ವಪ್ರಾಥಮಿಕ ಶಿಕ್ಷಣ ಅಗತ್ಯವೇ?

ಸೆ. 26ರ ಸಂಚಿಕೆಯಲ್ಲಿ ರಘುನಾಥ ಚ.ಹ. ಅವರ ಲೇಖನ ನನ್ನಲ್ಲಿ ಕೆಲವೊಂದು ಆಲೋಚನೆಗಳನ್ನು ಹುಟ್ಟುಹಾಕಿತು. ಆಟ ಆಡಿಕೊಂಡು ಸಂಭ್ರಮಿಸಬೇಕಾದ ಎಳೆವಯಸ್ಸಿನಲ್ಲಿ ಕ್ಲಿಷ್ಟ ಪಠ್ಯಕ್ರಮವನ್ನು ಹೊತ್ತ ಪೂರ್ವಪ್ರಾಥಮಿಕ (LKG, UKG) ಎಂಬ ಪೆಡಂಭೂತಕ್ಕೆ ಸಿಲುಕಬೇಕೆ? ಇದರಿಂದ ಮುಂದೆ ಓದಲೇಬೇಕಾದ ವಯಸ್ಸಿನಲ್ಲಿ ಮಗುವಿಗೆ ಕಿಂಚಿತ್ತೂ ಆಸಕ್ತಿ ಇಲ್ಲದಂತಾಗಬಹುದೇ? 6ರ ವಯೋಮಿತಿಯ ತನಕ ಮಗುವಿಗೆ ಪೂರ್ವಪ್ರಾಥಮಿಕ ಶಿಕ್ಷಣದ ಅಗತ್ಯ ಇದೆಯೆ? ಇದ್ದರೆ ಎಂತಹ ಪಠ್ಯಕ್ರಮ ಇರಬೇಕು? ನಿರ್ಧರಿಸುವವರು ಯಾರು?

—ಫಾ. ಎಡ್ವರ್ಡ್ ರೋಡ್ರಿಗಸ್ ಎಸ್. ಜೆ.
ಬೆಂಗಳೂರು

## ಮುಟ್ಟಿನ ಕತ್ತಲಿಗೆ ಅರಿವಿನ ದೀಪ

ಸೆ. 19ರ ಸಂಚಿಕೆಯಲ್ಲಿ ಜ್ಯೋತಿ ಹಿಟ್ನಾಳ್ ಬರೆದ 'ಮುಟ್ಟು ಅಸ್ಪೃಶ್ಯ ಮಾಡಿದವರು' ಲೇಖನ ವಾಸ್ತವಿಕ ಅಂಶಗಳನ್ನು ಒಳಗೊಂಡಿದೆ. ಮುಟ್ಟಿನ ಸಮಯದಲ್ಲಿ ಅನುಭವಿಸುವ ವೇದನೆ, ತಳಮಳ ಮತ್ತು ಆತಂಕ ಇಂದಿಗೂ ಎಷ್ಟೋ ಮನೆಗಳಲ್ಲಿ ಜೀವಂತವಾಗಿದೆ. ಮಾನಸಿಕವಾಗಿ ಧೈರ್ಯ ನೀಡಬೇಕಾದ ಪಾಲಕರೇ ಅವಳಲ್ಲಿ ಹೆದರಿಕೆ ಹೆಚ್ಚಿಸುತ್ತಾರೆ. ತನಗೆ ಆಗಬಾರದ್ದೇನೋ ಆಗಿದೆ ಎಂದು ಮಗು ಭಾವಿಸುತ್ತಾಳೆ. ಈ ಬಗೆಯ ವಾತಾವರಣ ಮಗುವಿನ ಆಟ – ಪಾಠಗಳ ಮೇಲೆಯೂ ಪರಿಣಾಮ ಬೀರುತ್ತದೆ. ತಂದೆ, ತಾಯಿ, ಮನೆಯ ಹಿರಿಯರನ್ನು ಅವಳು 'ಯಾಕೆ ಹೀಗೆ' ಎಂದು ಪ್ರಶ್ನಿಸುವಂತಿಲ್ಲ. ಅವಳನ್ನು ದೂರವಿರಿಸುವ ಪದ್ಧತಿ ಅಭದ್ರತೆ ಹುಟ್ಟಿಸುತ್ತದೆ. ಅವಳಲ್ಲಿರುವ ಈ ಕೀಳರಿಮೆ, ಅವಳೇ ಅಮ್ಮನಾದ ಮೇಲೂ ಮುಂದುವರಿದು ಅವಳ ಮಗಳೂ ಅದೇ ನೋವು ಅನುಭವಿಸುತ್ತಾಳೆ. ಆರೋಗ್ಯವೂ ಹಾಳಾಗುತ್ತದೆ.

ಸಹಜವಾಗಿ ನಡೆಯುವ ಈ ದೈಹಿಕವಾದ ಬದಲಾವಣೆಯ ಬಗ್ಗೆ ಹೆಣ್ಣುಮಕ್ಕಳಲ್ಲಿ ಅರಿವನ್ನು ಮೂಡಿಸಬೇಕು. ಅವಳ ನೋವಿಗೆ ಸ್ಪಂದಿಸಿ, ದಿನನಿತ್ಯದಂತೆ ಇರಲು ಬಿಡಬೇಕು. ಇದು ಬಹಳ ದೊಡ್ಡ ಜವಾಬ್ದಾರಿ ಎಂದು ನನ್ನ ಅನಿಸಿಕೆ. ಶಾಲೆಯಲ್ಲಿಯೂ ಶಿಕ್ಷಕಿಯರು, ಇದು ಸಹಜವಾದ ದೇಹದ ಪ್ರಕ್ರಿಯೆ ಎನ್ನುವುದನ್ನು ಮನದಟ್ಟು ಮಾಡಿಸಬೇಕು.

—ಸುಭದ್ರಾ ಹೆಗಡೆ, ಗುಜರಾತ್

## ಬೆಟ್ಟದ ಜೀವ ಕೊರಗ್ಗಾಂಡ

ಸೆ. 26ರ ಸಂಚಿಕೆಯಲ್ಲಿನ ಗುರುಗಣೇಶ್ ಭಟ್ ಬರೆದಿರುವ 'ಬೆಟ್ಟದ ಜೀವ ಕೊರಗ್ಗಾಂಡ' ಲೇಖನ ಚೆನ್ನಾಗಿತ್ತು. ಆಗುಂಬೆ ಬೆಟ್ಟದ ದಟ್ಟ ಕಾಡಿನ ತಪ್ಪಲಲ್ಲಿ, ಕಾಳಿಂಗ ಸರ್ಪಗಳು ಹರಿದಾಡುವ ನೆಲದಲ್ಲಿ, ನಕ್ಸಲ್ ಚಟುವಟಿಕೆಗಳಿಗೆ ಸುದ್ದಿಯಾದ ಜಾಗದಲ್ಲಿ, ಚಿಕ್ಕ ಗೂಡಿನಂಥ ಮಣ್ಣಿನ ಮನೆಯಲ್ಲಿ ಏಕಾಂಗಿಯಾಗಿ ಜೀವಿಸುತ್ತಿರುವ ವಯೋವೃದ್ಧ ಕೊರಗ್ಗಾಂಡರ ಬದುಕು ಬವಣೆಯನ್ನು ಲೇಖಕರು ಸೊಗಸಾಗಿ ಚಿತ್ರಿಸಿದ್ದಾರೆ.

– ಪಿ. ಜಯವಂತ ಪೈ, ಕುಂದಾಪುರ

## ಊಟವೋ ವಿಷವೋ

ಸೆ. 26ರ ಸಂಚಿಕೆಯಲ್ಲಿ ನರೇಂದ್ರ ರೈ ದೇರ್ಲ ಬರೆದ 'ಊಟವೋ ವಿಷವೋ' ಲೇಖನ ಗಂಭೀರ ಚಿಂತನೆಗೊಳಪಡಿಸುವ ಹಾಗಿದೆ. ಉಸಿರಾಡುವ ಗಾಳಿ, ತಿನ್ನುವ ಆಹಾರ, ಕುಡಿಯುವ ನೀರು ಎಲ್ಲವೂ ಕಲುಷಿತಗೊಂಡು ಮನುಷ್ಯ ಕಾಯಿಲೆಗಳ ಗೂಡಾಗಿದ್ದಾನೆ. ಪ್ರಕೃತಿ ನಮಗೆ ಎಲ್ಲವನ್ನೂ ಕೊಟ್ಟಿದೆ. ಆದರೆ ತನ್ನ ತೆವಲುಗಳಿಗೆ ಪ್ರಕೃತಿಯನ್ನು ನಿರ್ದಾಕ್ಷಿಣ್ಯವಾಗಿ ನಡೆಸಿಕೊಳ್ಳುತ್ತಿರುವ ರೀತಿ ಖಂಡನೀಯ. ಇದಕ್ಕೆ ಈಗಾಗಲೇ ಉಂಟಾಗಿರುವ ವ್ಯತಿರಿಕ್ತ ಪರಿಣಾಮಗಳನ್ನು ಅರ್ಥಮಾಡಿಕೊಳ್ಳದಿದ್ದರೆ ಮತ್ತಷ್ಟು ಪರಿಸ್ಥಿತಿ ಮತ್ತಷ್ಟು ಕೆಡುವುದರಲ್ಲಿ ಅನುಮಾನವಿಲ್ಲ.

– ಎಚ್.ಎನ್. ಕಿರಣ್ ಕುಮಾರ್,
ಹಳೇಹಳ್ಳಿ

'ಊಟವೋ ವಿಷವೋ' ಲೇಖನ ನಮ್ಮ ಆಹಾರದ ವೈಖರಿಗೆ ಹಿಡಿದ ಕೈಗನ್ನಡಿ. ರಾಸಾಯನಿಕ ಹಾಗೂ ಸಾವಯವಗಳ ಮಧ್ಯೆ ನಿಂತು ಏದುಸಿರುಬಿಡುವ ಬರುವ ಪೀಳಿಗೆ ನೆನೆದು ಕರುಳುಹಿಂಡಿ ಬರುತ್ತದೆ. ವಂಚಕರು, ವಿಜ್ಞಾನ ಹಾಗೂ ರೈತರ ನಡುವೆ ನುಸುಳಿಕೊಂಡು ವಿಷಜಾಲವನ್ನು ಹೆಣೆಯುತ್ತಿರುವುದು ವಿಷಾದನೀಯ. ಯಾರಲ್ಲಿ ಮೊರೆಯಿಡೋಣ? ಕಾಲವೇ ಉತ್ತರಿಸಬೇಕು.

– ಮೈ. ಸತೀಶ ಕಮಾರ,
ಬಂಗಾರಪೇಟೆ




## ಮನಕಲುಕಿದ ಲೇಖನ

ಬನ್ನೂರು ಕೆ. ರಾಜು ಅವರ ಲೇಖನ, 'ಗುರುದೇವ ರಾಧಾಕೃಷ್ಣನ್' (ಸೆ.19ರ ಸಂಚಿಕೆ) ಮನ ಕಲಕಿತು. ಸರಿ ಸುಮಾರಾಗಿ ಒಂದು ಶತಮಾನಕ್ಕೆ ಎಷ್ಟೆಲ್ಲಾ ಬದಲಾವಣೆ... ಕಲಿಕೆಯಲ್ಲಿ, ಹಾಗೂ ಗುರುಶಿಷ್ಯರ ಸಂಬಂಧದಲ್ಲಿ... ಈಗಲೂ ರಾಧಾಕೃಷ್ಣನ್ ಅವರಂಥ ಗುರುಗಳು ಹಾಗೂ ಒಳ್ಳೆಯ ಶಿಷ್ಯರು, ಅಲ್ಲಿ ಇಲ್ಲಿ ಇರಬಹುದು. ಆದರೆ ಇಂತಹ ಕಲುಷಿತ ವಾತಾವರಣದಲ್ಲಿ ಅವರು ಬೆಳಕಿಗೆ ಬರುವುದು ದುರ್ಲಭ.

—ಪ್ರಭಾ ಶ್ಯಾಮ್‌ಸುಂದರ್



## ಗಣೇಶ್ ಮಾತು

ಸೆ. 26ರ ಸಂಚಿಕೆಯಲ್ಲಿ 'ಗೀತಾ ಕುರಿತು ಗಣೇಶ್ ಮಾತು' ಸಂದರ್ಶನ ಚೆನ್ನಾಗಿತ್ತು. ಗೀತಾ ಸಿನಿಮಾ ಗೋಕಾಕ್ ಚಳವಳಿ ಹಿನ್ನೆಲೆಯ ಕಥೆ ಹೊಂದಿದೆ ಎಂದು ತಿಳಿದು ಸಿನಿಮಾ ಕುರಿತು ಕುತೂಹಲ ಹುಟ್ಟಿದೆ.

—ಸೋಮಣ್ಣ ಡಿ.ಎಸ್.

## ಗುಡ್ ಲಕ್ ಪ್ರಿಯಾ

ಸೆ.26ರ ಸಂಚಿಕೆಯ 'ಕಣ್ಣನ್ನೆ ಹುಡುಗಿ' ಸಿನಿಮಾ ಲೇಖನ ಓದಿದೆ. ಕನ್ನಡ ಚಿತ್ರರಂಗಕ್ಕೆ ಅನೇಕ ಪರಭಾಷಾ ನಟಿಯರು ಎಂಟ್ರಿ ಕೊಟ್ಟರೂ ಭದ್ರಸ್ಥಾನ ಉಳಿಸಿಕೊಂಡು ಬಂದಿರುವವರು ಬೆರಳೆಣಿಕೆಯಷ್ಟು ಮಂದಿ. ಸಿತಾರ, ಪ್ರಿಯಾಮಣಿ ಅವರಂಥ ನಟಿಯರು ತಮ್ಮ ಅಭಿನಯದಿಂದ ಇಂದಿಗೂ ಛಾಪು ಉಳಿಸಿಕೊಂಡಿದ್ದಾರೆ. ಕನ್ನಡ ಚಿತ್ರರಂಗ ಈಗ ಪ್ರವೇಶಿಸುತ್ತಿರುವ ಪ್ರಿಯಾ ವಾರಿಯರ್‌ಗೆ ಗುಡ್ ಲಕ್.

—ಸಿದ್ದಾರ್ಥ, ಉಡುಪಿ

## ಉಪಯುಕ್ತ ಲೇಖನ

ಸೆ. 19ರ ಸಂಚಿಕೆಯಲ್ಲಿ ಉಮಾ ಅನಂತ್ ಬರೆದಿರುವ 'ಥೈರಾಯ್ಡ್ ಗ್ರಂಥಿ ಎಂಬ ಜೀವರಕ್ಷಕ' ಲೇಖನ ಚೆನ್ನಾಗಿತ್ತು. ನನಗೆ ಥೈರಾಯ್ಡ್ ಸಮಸ್ಯೆ ಇದೆ. ಹಾಗಾಗಿ ಈ ಲೇಖನದಿಂದ ಸಹಾಯ ಆಯಿತು.

—ಸುಮವೀಣಾ, ಹಾಸನ

ಸೆ. 26ರ ಸುಧಾದಲ್ಲಿ ಪ್ರಕಟವಾದ ಲಕ್ಷ್ಮೀ ತಿಮ್ಮಪ್ಪ ಅವರ ಹೆಸರಿನಲ್ಲಿರುವ 'ಕಮ್ಮಾರನ ಜಾಣ್ಮೆ' ಮಕ್ಕಳ ಕತೆ ನನ್ನದು. ಈ ಕತೆ ನನ್ನ 'ಮೋಡದ ಹುಡುಗಿ' ಸಂಕಲನದಲ್ಲಿದೆ. ಅದನ್ನು ಶೀರ್ಷಿಕೆ ಸೇರಿದಂತೆ ಒಂದಕ್ಷರವೂ ಬದಲಾಯಿಸದೆ ಕಳುಹಿಸಿದ್ದಾರೆ. ಕೃತಿಚೌರ್ಯ ನೋವಿನ ವಿಷಯ.

—ಪ. ರಾಮಕೃಷ್ಣ ಶಾಸ್ತ್ರಿ

'ಸುಧಾ' ಕೃತಿಚೌರ್ಯ ಬೆಂಬಲಿಸುವುದಿಲ್ಲ. ಕೃತಿಚೌರ್ಯ ಮಾಡಿರುವುದು ತಿಳಿದಾಗ, ಕೃತಿಚೋರರ ಮುಂದಿನ ಬರಹಗಳನ್ನು ಪ್ರಕಟಿಸುವುದಿಲ್ಲ.

—ಸಂಪಾದಕ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in